**SC No.39/2024**
**PW-5**
**CW-9**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ:**39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರವಿ ಸಚ್ಚಿದೇವ | ಪ್ರಾಸಾ: 5 |
| ತಂದೆಯ ಹೆಸರು | : | ಕರಮಚಂದ ಸಚ್ಚಿದೇವ | ಚಾಸಾ: 9 |
| ವಯಸ್ಸು | : | 38 ವರ್ಷ | ದಿನಾಂಕ : 19.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಬಟ್ಟೆ ಅಂಗಡಿಯಲ್ಲಿ ಮ್ಯಾನೇಜರ್ ಕೆಲಸ | |
| ವಾಸಸ್ಥಳ | : | ಶಿವಾಜಿ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಬೆಳಗಾವಿಯ ಗಣಪತಿ ಗಲ್ಲಿಯಲ್ಲಿರುವ ಚಾಸಾ-8 ರವರ ರಾಜಕುಮಾರ ಫ್ಯಾಷನ್ಸ ಮತ್ತು ರಾಜಕುಮಾರ ಕಲೇಕ್ಷನ್ಸ ಎನ್ನುವ ಹೆಸರಿನ ಬಟ್ಟೆ ಅಂಗಡಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇನು. ನನಗೆ ಮೃತ ಪ್ರಿಯಾಂಕಾ ಗೊತ್ತು. ಆಕೆ ಕೂಡ ಆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಳು. ನನಗೆ ಈ ಪ್ರಕರಣದ ಆರೋಪಿ ವಿಠ್ಠಲ ಗೊತ್ತು. ಆತ ಪ್ರಿಯಾಂಕಾಳೊಂದಿಗೆ ಮಾತನಾಡಲು ನಮ್ಮ ಅಂಗಡಿಗೆ ಬರುತ್ತಿದ್ದನು.

2. ದಿಃ 04.09.2023 ರಂದು ರಾತ್ರಿ 10-30 ಗಂಟೆಗೆ ಆರೋಪಿಯು ನನಗೆ ಫೋನ್ ಮಾಡಿ ಪ್ರಿಯಾಂಕಾ ಆತ್ಮಹತ್ಯೆ ಮಾಡಲು ಪ್ರಯತ್ನಿಸುತ್ತಿದ್ದಾಳೆ ಮತ್ತು ನೀನು ಆಕೆಯ ಬಾಡಿಗೆ ಮನೆಗೆ ಹೋಗಿ ನೋಡು ಎಂದು ಹೇಳಿದನು. ಅವರ ನಡುವೆ ಜಗಳ ಆಗಿತ್ತು ಎಂದು ನನಗೆ ತಿಳಿಯಿತು. ಆರೋಪಿಯಿಂದ ಫೋನ ಬಂದ ನಂತರ ನಾನು ಈ ವಿಷಯವನ್ನು ಅಂಗಡಿಯ ಮಾಲೀಕರಾದ ಚಾಸಾ-8 ರವರಿಗೆ ತಿಳಿಸಿದೆನು. ಚಾಸಾ-8 ರವರು ಈ ವಿಷಯವನ್ನು ಪ್ರಿಯಾಂಕಾ ಬಾಡಿಗೆಗೆ ಇದ್ದ ಮನೆಯ ಮಾಲೀಕರಿಗೆ ತಿಳಿಸಿದರು. ಆ ಬಳಿಕ ನನಗೆ ಪ್ರಿಯಾಂಕಾ ನೇಣು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಯಿತು. ಪೋಲಿಸರು ಈ ಬಗ್ಗೆ ನನ್ನ ಆಗ ಕರೆಯಿಸಿ ವಿಚಾರಣೆ ಮಾಡಿದ್ದರು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎ. ವಿ. ಎನ್. ವಕೀಲರಿಂದಃ</u>

3. ನನಗೆ ಮೃತ ಪ್ರಿಯಾಂಕಾಳ ಪರಿಚಯ ಸುಮಾರು 25 ವರ್ಷಗಳಿಂದ ಇತ್ತು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಪೋಲಿಸರು ಎನು ಬರೆದಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ನನಗೆ ಮತ್ತು ಆರೋಪಿಗೆ ಯಾವುದೇ ಪರಿಚಯ ಇರಲಿಲ್ಲ. ಆರೋಪಿಯು ಪ್ರಿಯಾಂಕಾಳನ್ನು ಕಾಣಲು ನಮ್ಮ ಬಟ್ಟೆ ಅಂಗಡಿಗೆ ಬರುತ್ತಿದ್ದ ಎಂದು ನಾನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆರೋಪಿಯು ನನಗೆ ಘಟನೆಯ ದಿನ ಫೋನ್ ಮಾಡೇ ಇಲ್ಲ ಎನ್ನುವುದು ನಿಜವಲ್ಲ. ಪ್ರಿಯಾಂಕಾ ಯಾವ ಕಾರಣಕ್ಕಾಗಿ ತೀರಿಕೊಂಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

**SC No.39/2024**
**PW-5**
**CW-9**

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.